## ಈ ಲೇಖನದ ವಿಷಯಾನುಕ್ರಮಣಿಕೆ


| | |
|---|---|
| **ಸಾವನ್ನು ಎದುರಿಸುವ ಬಗೆ — 3** | **2** |
| **ಮಾಡಿದ ಪಾಪಗಳನ್ನು ನೆನೆಯಬೇಕು** | **4** |
| **ಯಜ್ಞ ದಾನ ತಪಸ್ಸು** | **9** |
| **ದೇವರ ಪೂಜೆ, ಮಂತ್ರಗಳ ಜಪ** | **13** |
| **ನೈವೇದ್ಯದಲ್ಲಿ ಆದರ** | **15** |
| **ಏಕಾದಶಿ ಬಿಡಬೇಡಿ** | **17** |
| **ನಮಸ್ಕಾರ** | **18** |
| **ಲೇಖನಯಜ್ಞ** | **21** |

## ಸಾವನ್ನು ಎದುರಿಸುವ ಬಗೆ – 3

ಸಾವು ಸಮೀಪಿಸುತ್ತಿದ್ದಂತೆ ಮುಗಿಸಬೇಕಾದ ಲೌಕಿಕ ಕಾರ್ಯಗಳು ಹಾಗೂ ಸಾವಿನ ನಂತರದ ಪರಿಸ್ಥಿತಿ ಹೇಗಿರುತ್ತದೆ ಎನ್ನುವದನ್ನು ಹಿಂದಿನ ಎರಡು ಲೇಖನಗಳಲ್ಲಿ ತಿಳಿದುಕೊಂಡೆವು.

ಮಾಡಿದ ಪಾಪಕರ್ಮಗಳ ಅನುಸಾರವಾಗಿ ಶಿಕ್ಷೆಯನ್ನು ಅನುಭವಿಸಲೇಬೇಕು. ಯಮಲೋಕದ ಮಾರ್ಗ ಮತ್ತು ನರಕಗಳ ಯಾತನೆ ಎರಡನ್ನೂ ಅನುಭವಿಸಲೇಬೇಕು. ನರಕದಲ್ಲಿ ಅನುಭವಿಸಬೇಕಾದಷ್ಟು ಪಾಪಗಳನ್ನು ಅನುಭವಿಸಿದ ನಂತರ ಉಳಿದ ಪಾಪವನ್ನು ಅನುಭವಿಸಲು ನಾವು ಭೂಮಿಯಲ್ಲಿ ಹುಟ್ಟಿ ಬರಲೇಬೇಕು. ಆ ಜನ್ಮಗಳೂ ಪಾಪ-ಪುಣ್ಯಗಳ ಅಧೀನ. ಯಾವ ಯೋನಿಯಲ್ಲಿ ಹುಟ್ಟಿಬರುತ್ತೇವೆಯೋ, ಯಾವ ಪ್ರದೇಶದಲ್ಲಿ ಹುಟ್ಟಿ ಬರುತ್ತೇವೆಯೋ ಒಂದೂ ತಿಳಿದಿಲ್ಲ.

ಆದರೆ, ನಾವು ಪಾಪ ಮಾಡಿರುವದು ನಿಶ್ಚಿತ. ವೇದ ಹೇಳುವಂತೆ — ಮನಸಾ ವಾಚಾ ಹಸ್ತಾಭ್ಯಾಮ್, ಪದ್ಭ್ಯಾಮುದರೇಣ ಶಿಶ್ನಾ.. ನಮ್ಮ ದೇಹದ ಸಕಲ ಅವಯವಗಳಿಂದಲೂ ಪಾಪ ಮಾಡಿದ್ದೇವೆ. ಮನಸ್ಸಿನಿಂದ, ಮಾತಿನಿಂದ, ಕೈಗಳಿಂದ, ಕಾಲ್ಗಳಿಂದ, ಜ್ಞಾನೇಂದ್ರಿಯಗಳಿಂದ, ಕರ್ಮೇಂದ್ರಿಯಗಳಿಂದ. ಈ ಪಾಪಗಳ ಫಲವನ್ನು ಅನುಭವಿಸುವ ಕಾಲ ಹತ್ತಿರವಾಗುತ್ತಿದೆ.

ಸಣ್ಣವರಿದ್ದಾಗ ತಿಳುವಳಿಕೆಯಿಲ್ಲದೆ, ದೊಡ್ಡವರಾದಾಗ ದುಷ್ಟಬುದ್ಧಿಯಿಂದ, ಮುದುಕರಾದಾಗ ವಿಧಿಯಿಲ್ಲದೇ ಪಾಪಗಳನ್ನು ಮಾಡುತ್ತಿದ್ದೇವೆ. ಅವುಗಳ ಬಗ್ಗೆ ಪಶ್ಚಾತ್ತಾಪವನ್ನು ಪಡದೇ, ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳದೇ ಮುದುಕರಾಗುತ್ತಿದ್ದಂತೆ ಒಳ್ಳೆಯವರ ಸೋಗು ಹಾಕಿ ಬದುಕುತ್ತೇವೆ. ಅದೂ ಪಾಪವೇ. ದಾಂಭಿಕತೆ ಅತೀ ಹೀನವಾದ ಒಂದು ಅಪರಾಧ.

ಸಾವಿನ ಹೊಸ್ತಿಲಿನಲ್ಲಿರುವ ಮನುಷ್ಯ ಆ ಪಾಪಗಳ ಪ್ರಾಯಶ್ಚಿತ್ತಕ್ಕಾಗಿ ತಯಾರಾಗಬೇಕು. ದೇವರ ಮುಂದೆ ಎಲ್ಲವನ್ನೂ ನಿವೇದಿಸಿಕೊಂಡು ಉದ್ಧಾರದ

ದಾರಿಯನ್ನು ಕಂಡುಕೊಳ್ಳಬೇಕು. ಅದಕ್ಕಾಗಿ ಏಕಾಂತವನ್ನು ಮೊರೆ ಹೋಗಬೇಕು.

## ಮಾಡಿದ ಪಾಪಗಳನ್ನು ನೆನೆಯಬೇಕು

ಮೊದಲಿಗೆ ಸಣ್ಣವರಿದ್ದಾಗಿನಿಂದ ಏನೇನು ಅಪರಾಧ ಮಾಡಿದ್ದೇವೆ ಒಂದು ಪಟ್ಟಿ ಮಾಡಬೇಕು. ನಿಜ. ಇದು ಅತೀ ವಿಚಿತ್ರ ಎನಿಸುತ್ತದೆ. ವಿಚಿತ್ರ ಎನ್ನುವದಕ್ಕಿಂತ ಮನಸ್ಸು ಅದನ್ನು ಮಾಡಬಿಡುವದಿಲ್ಲ. ಕಾರಣ, ನಾವು ಮಾಡಿದ ಪಾಪಗಳನ್ನು ನೆನೆದಾಗ ನಮ್ಮ ಮುಂದೆ ನಾವೇ ಸಣ್ಣವರಾಗುತ್ತೇವೆ. ನಮ್ಮ ಕುರಿತು ನಮಗೇ ನಾಚಿಕೆಯುಂಟಾಗುತ್ತದೆ, ಹಲವು ಬಾರಿ ಅಸಹ್ಯ ಉಂಟಾಗುತ್ತದೆ. ಹೀಗಾಗಿ ಮನಸ್ಸು ಮಾಡ ನೀಡುವದಿಲ್ಲ.

ಆದರೆ, ನಾಳೆ ಯಮಧರ್ಮನ ಮುಂದೆ ಎಲ್ಲವನ್ನೂ ಹೇಳಲಾಗುತ್ತದೆ. **“ತರ್ಜಯಿತ್ವಾ ಮುಖೇ ಭೃಶಮ್”** ಎಂಬ ಶ್ರೀ ಮಧ್ವಾನುಜಾಚಾರ್ಯರ ಮಾತು ನೆನಪಿನಲ್ಲಿರಬೇಕು. ಮುಳ್ಳಿನ ಕೈಗಳ ಯಮದೂತರು ಮುಖಕ್ಕೆ ರಾಚಿ ರಾಚಿ ಬಡಿದು

ನಾವು ಮಾಡಿದ ತಪ್ಪನ್ನು ಯಮಧರ್ಮನ ಮುಂದೆ ಒಪ್ಪಿಸುತ್ತಾರೆ. ಸತ್ತ ಬಳಿಕ ನಡೆದೇ ನಡೆಯುವ ಘಟನೆ.

ಆ ಘೋರವನ್ನು ತಪ್ಪಿಸಿಕೊಳ್ಳಬೇಕೆಂದರೆ ಇಲ್ಲಿ ಆ ಪಾಪಗಳ ಪ್ರಾಯಶ್ಚಿತ್ತ ನಡೆಯಲೇಬೇಕು.

ಪಾಪಗಳ ಪಟ್ಟಿಯನ್ನು ಮಾಡಿ. ಸಣ್ಣ ಮಕ್ಕಳಿದ್ದಾಗ ಕಳ್ಳತನ ಮಾಡಿದ್ದು, ಸುಳ್ಳು ಹೇಳಿದ್ದು, ಚಾಡಿ ಹೇಳಿದ್ದು, ಕ್ಷುದ್ರ ಬುದ್ಧಿಯಿಂದ ಮತ್ತೊಬ್ಬರಿಗೆ ತೊಂದರೆ ಉಂಟು ಮಾಡಿದ್ದು, ಇನ್ನೊಬ್ಬರಿಗೆ ಗೊತ್ತಾಗದಂತೆ ಹೊಡೆದು ಬಂದದ್ದು, ತಂದೆ ತಾಯಿಗಳಿಗೆ, ಅಕ್ಕ ತಂಗಿಯರಿಗೆ, ಅಣ್ಣ ತಮ್ಮಂದಿರಗೆ, ಶಿಕ್ಷಕರಿಗೆ ವಿಚಿತ್ರವಾದ ರೀತಿಯಲ್ಲಿ ನೋವುಂಟು ಮಾಡಿದ್ದು, ಸಣ್ಣ ಹುಳಗಳಿಂದ ಆರಂಭಿಸಿ ಪ್ರಾಣಿಗಳವರೆಗೆ ನೀಡಿದ ಹಿಂಸೆ ಎಲ್ಲವನ್ನೂ ಪಟ್ಟಿಮಾಡಿ.

ಆ ನಂತರದ ಯೌವನದ ತಪ್ಪುಗಳು. ಮನುಷ್ಯ ಮಾಡುವ ಅತೀ ದೊಡ್ಡ ಅಪರಾಧಗಳ ಮೂಲ ಕಾಮ ಮತ್ತು ಕ್ರೋಧ. ಶ್ರೀಮದಾಚಾರ್ಯರು

ಪಾಪಗಳನ್ನು ಎಂಟು ವಿಧವಾಗಿ ವಿಂಗಡಿಸಿದ್ದಾರೆ. ಎಂಟು ಹಂತದ ಪಾಪಗಳು. ವಿಚಿತ್ರ ಎಂದರೆ ಲೈಂಗಿಕ ಅಪರಾಧಗಳು ಈ ಎಂಟೂ ಹಂತಗಳಲ್ಲಿ ಸ್ಥಾನವನ್ನು ಪಡೆದಿವೆ.

ಮಾನಸಿಕವಾದ ವ್ಯಭಿಚಾರ, ಮಾತಿನ ವ್ಯಭಿಚಾರ, ದೈಹಿಕ ವ್ಯಭಿಚಾರಗಳು, ಕಾಮದ ದೃಷ್ಟಿಯಿಂದ ಮತ್ತೊಬ್ಬರನ್ನು ಕಂಡದ್ದು, ಮಾತನಾಡಿಸಿದ್ದು, ಕೂಡಿದ್ದು ಎಲ್ಲವೂ ಸಹ ಘೋರತರ ಅಪರಾಧಗಳೇ.

ಅಧಿಕಾರದ ಮದದಿಂದ ಮಾಡಿದ ತಪ್ಪುಗಳು, ಹಣದ ಮದದಿಂದ ಮಾಡಿದ ಅಪರಾಧಗಳು, ರೂಪದ ಮದದಿಂದ ಮಾಡಿದ ಅವಮಾನಗಳು.

ಹಣಕ್ಕಾಗಿ ಮಾಡಿದ ಕಳ್ಳತನ, ಸುಲಿಗೆಗಳು. ಮತ್ತೊಬ್ಬರಿಗೆ ದೊರೆಯಬೇಕಾಗಿದ್ದನ್ನು ದೊರೆಯದಂತೆ ಮಾಡಿದ್ದು. ಮತ್ತೊಬ್ಬರ ಕೆಲಸಕ್ಕೆ, ಅನ್ನಕ್ಕೆ, ಜೀವನಕ್ಕೆ ಸಂಚಕಾರ ತಂದದ್ದು.

ಇನ್ನು ಹಿರಿಯರ, ಗುರುಗಳ, ಧರ್ಮದ, ಶಾಸ್ತ್ರಗಳ, ದೇವತೆಗಳ ನಿಂದೆ ಇವು ಮಹತ್ತರ ಅಪರಾಧಗಳು.

ನಿಮಗೆ ಸಂಧ್ಯಾವಂದನೆ, ಶ್ರಾದ್ಧದಂತಹ ವಿಷಯಗಳಲ್ಲಿ ನಂಬಿಕೆಯಿಲ್ಲ. ಆ ಶ್ರಾದ್ಧಾದಿ ಧರ್ಮಗಳನ್ನೇ ಮಾಡಬೇಕಾಗಿಲ್ಲ, ಮನಸ್ಸಿನಲ್ಲಿ ಶ್ರಾದ್ಧ ಮಾಡಿದರೆ ಸಾಕು, ಹಾಗೆ ಮಾಡಬೇಕಾಗಿಲ್ಲ, ಹೀಗೆ ಮಾಡಬೇಕಾಗಿಲ್ಲ ಮುಂತಾಗಿ ಧರ್ಮವನ್ನು ಜರಿಯುವದೂ ಸಹ ಮಹತ್ತರ ನಿಂದೆ. ಆ ರೀತಿಯಾಗಿ ನಿಂದೆ ಮಾಡುವವರ ಸಂಪರ್ಕದಲ್ಲಿರುವದೂ ಸಹ ಮಹತ್ತರ ಅಪರಾಧ.

ದ್ರೌಪದೀ, ಕುಂತಿ ಮುಂತಾದ ಶ್ರೇಷ್ಠ ಸ್ತ್ರೀಯರ ಕುರಿತು ಸರಿಯಾಗಿ ತಿಳಿದುಕೊಳ್ಳದೇ ನಿಂದೆ ಮಾಡಿದ್ದು, ರಂಭಾ, ಊರ್ವಶೀ ಮುಂತಾದ ದೇವತಾಸ್ತ್ರೀಯರ ಕುರಿತು ತಿಳಿಯದೇ ಅವರನ್ನು ಅಪಹಾಸ ಮಾಡಿದ್ದು ಎಲ್ಲವೂ ಸಹ ನಮ್ಮನ್ನು ಘೋರಪ್ರಪಾತಕ್ಕೆ ಬೀಳಿಸುವಂತಹ ದುಷ್ಟ ದುಷ್ಕರ್ಮಗಳು.

ಹೀಗೆ, ಸುಳ್ಳು, ಕಳ್ಳತನ, ಹಾದರ, ಹಿಂಸೆ, ಕೊಲೆ ಮತ್ತು ನಿಂದೆ ಎಂಬ ಆರು ರೀತಿಯಲ್ಲಿ ನಾವು ಕ್ಷುದ್ರಪಾಪ, ಪಾಪ, ಉಪಪಾತಕ, ಉಪಪಾತಕ, ಪಾತಕ, ಮಹಾಪಾತಕ, ಸುಮಹಾಪಾತಕ, ಅತೀಸುಮಹಾಪಾತಕ ಎಂಬ ಎಂಟು ಹಂತದ ಅಪರಾಧಗಳನ್ನು ಮಾಡಿರುತ್ತೇವೆ.

ಈ ಪಾಪಗಳ ವಿವರಣೆ ಭಯಾನಕವಾದದ್ದು. ಕೈಕಾಲುಗಳ ನೋವಿನಿಂದ ಆರಂಭಿಸಿ, ವಿಧವಿಧವಾದ ರೋಗಗಳು, ಪ್ರಾಣಿ ಪಕ್ಷಿಗಳ ಜನ್ಮ, ಒಂದು ಸಾವಿರ ವರ್ಷದಿಂದ ಆರಂಭಿಸಿ, ಒಂದು ಯುಗದ ಕಾಲ, ನಾಲ್ಕು ಯುಗಗಳ ಕಾಲ, ಮನ್ವಂತರಗಳ ಕಾಲ, ಬ್ರಹ್ಮದೇವರ ಪ್ರಳಯದವರೆಗಿನ ಕಾಲದವರೆಗೆ ಅನುಭವಿಸಬೇಕಾದ ನರಕಗಳಿವೆ. ಸಾಯುವ ಕಾಲ ಸಮೀಪಿಸಿದೊಡನೆ ನಾವು ಮಾಡಿದ ಪಾಪಗಳ ಪಟ್ಟಿಯನ್ನು ನಾವೇ ತಯಾರಿಸಿದರೆ ಅದರಿಂದ ಉದ್ಧಾರವಾಗುವ ಬಗೆಯನ್ನು ಅರಿಯಲು ಸಾಧ್ಯ. ಅನುಷ್ಠಾನ ಮಾಡಲು ಸಾಧ್ಯ.

ನಮ್ಮ ಪಾಪಗಳನ್ನು ಲೆಕ್ಕಹಾಕಲು ನಮ್ಮ ಮನಸ್ಸು ಹಿಂಜರಿಯುತ್ತದೆ. ಬೇಡ ಎನ್ನುತ್ತದೆ. ಇವೆಲ್ಲ ಭಯ ಬೀಳಿಸುವ ವಿಷಯ, ಸ್ಪರ್ಶಿಸುವದೇ ಬೇಡ ಎನ್ನುತ್ತದೆ. ಆದರೆ ಈ ಮನಸ್ಸು ನಮ್ಮನ್ನು ಹೀಗೆಯೇ ಮೋಸಗೊಳಿಸುತ್ತ ಬಂದಿದೆ. ನಮ್ಮಿಂದ ಧರ್ಮಾಚರಣೆ ಮಾಡಿಸದೇ, ಅಧರ್ಮಾಚರಣೆ ಮಾಡಿಸುತ್ತ ಬಂದಿದೆ. ಕಡೆಗೆ ಸಾಯುವ ಕ್ಷಣಕ್ಕಾದರೂ ಈ ಮನಸ್ಸಿನ ಸೋಗಲಾಡಿತನವನ್ನು ಹತ್ತಿಕ್ಕಿ ನಾವು ಮಾಡಿದ ಪಾಪಗಳನ್ನು ಪಟ್ಟಿ ಮಾಡಬೇಕು. ಮಾಡಲೇಬೇಕು.

ಆಗ ತಿಳಿಯುತ್ತದೆ, ನಾವೆಲ್ಲಿದ್ದೇವೆ ಎಂದು. ನಾವು ಎಂತಹ ಘೋರ ಅನರ್ಥಕ್ಕೆ ಒಳಗಾಗಲಿದ್ದೇವೆ ಎಂದು.

## ಯಜ್ಞ ದಾನ ತಪಸ್ಸು

ಆ ನಂತರ ಅವುಗಳ ಪರಿಹಾರಕ್ಕಾಗಿ ಪ್ರಯತ್ನ ಆರಂಭ ಮಾಡಬೇಕು.

ನೋಡಿ, ಪಾಪಗಳು ಎಷ್ಟಿವೆಯೋ ಅಷ್ಟು ರೀತಿಯ ಪ್ರಾಯಶ್ಚಿತ್ತಗಳಿವೆ. ಆದರೆ ಎಲ್ಲ ಪ್ರಾಯಶ್ಚಿತ್ತಗಳೂ

ಮೂರು ರೀತಿಯಾದದ್ದು. ಯಜ್ಞ, ದಾನ ಮತ್ತು ತಪಸ್ಸು. ಶ್ರೀಕೃಷ್ಣನೇ ಗೀತೆಯಲ್ಲಿ ಹೇಳುತ್ತಾನೆ — **"ಯಜ್ಞೋ ದಾನಂ ತಪಶ್ಚೈವ ಪಾವನಾನಿ ಮನೀಷಿಣಾಮ್"** ಎಂದು.

ಭಗವಂತನಲ್ಲಿ ಭಕ್ತಿಯುಳ್ಳ ಜನರಿಗೆ ಯಜ್ಞ, ದಾನ ತಪಸ್ಸುಗಳು ಪಾವಿತ್ರ್ಯವನ್ನು ನೀಡುತ್ತವೆ, ಅರ್ಥಾತ್ ಪಾಪಗಳನ್ನು ಪರಿಹರಿಸುತ್ತವೆ.

ಯಜ್ಞ ಎಂದರೆ ದ್ರವ್ಯಯಜ್ಞ. ಕ್ರಿಯಾಯಜ್ಞಗಳು. ದುರ್ಯೋಧನಾದಿಗಳ ಸಂಹಾರ ಶ್ರೇಷ್ಠವಾದ ಧರ್ಮ. ಆದರೆ ಅದನ್ನು ಅಧರ್ಮ ಎಂದು ಧರ್ಮರಾಜ ತಿಳಿದ. ಆ ರೀತಿಯಾಗಿ ತಪ್ಪು ತಿಳಿದ ಪಾಪದ ಪರಿಹಾರಕ್ಕಾಗಿ ಅಶ್ವಮೇಧಗಳನ್ನು ಮಾಡಿ ಪಾಪ ಪರಿಹಾರ ಮಾಡಿಕೊಂಡ.

ಈ ಯಜ್ಞಕ್ಕಿಂತಲೂ ಮಿಗಿಲಾಗಿ ನಮ್ಮ ಪಾಪ ಪರಿಹಾರ ಮಾಡುವ ಸತ್ಕರ್ಮ ದಾನ. ಕಾರಣ, ಇಲ್ಲಿ ನಾವು ಸಂಪಾದನೆ ಮಾಡಿದ ಹಣದ ತ್ಯಾಗವಿದೆ. ವಿತ್ತದ ಮೇಲೆ ಮನುಷ್ಯನಿಗೆ ಹೆಚ್ಚಿನ ಅಭಿಮಾನ. ಆ ಅಭಿಮಾನವುಳ್ಳ ವಸ್ತುವನ್ನು

ನೀಡುವದರಿಂದ ಹೆಚ್ಚಿನ ಫಲವನ್ನು ಪಡೆಯುತ್ತೇವೆ. ಆದರೆ, ಯೋಗ್ಯರಾದವರಿಗೆ ನೀಡಿದಾಗ ಮಾತ್ರ ದಾನ ಫಲಪ್ರದವಾಗುತ್ತದೆ.

ಇದಕ್ಕಿಂತಲೂ ಮಿಗಿಲಾದ ಪಾಪ ಪರಿಹಾರಕವಾದ ಸತ್ಕರ್ಮ ತಪಸ್ಸು. ಕಾರಣ, ಹಣದ ಮೇಲಿನ ಅಭಿಮಾನಕ್ಕಿಂತ ಮನುಷ್ಯನಿಗೆ ತನ್ನ ದೇಹದ ಮೇಲಿನ ಅಭಿಮಾನ ಹೆಚ್ಚು. ಆ ದೇಹದ ದಂಡನೆಯೇ ತಪಸ್ಸು. ಸುಲಭವಾಗಿ ಮಾಡಲು ಸಾಧ್ಯವಿಲ್ಲ. ಮಾಡಿದಷ್ಟೂ ಹೆಚ್ಚೆಚ್ಚು ಪಾಪ ಪರಿಹಾರ.

ಹೀಗೆ ಯಜ್ಞ, ದಾನ, ತಪಸ್ಸುಗಳಿಂದ ಪಾಪ ಪರಿಹಾರವನ್ನು ಮಾಡಿಕೊಳ್ಳಬೇಕು.

ಯಾವುದನ್ನು ಹೇಗೆ ಮಾಡಬೇಕು, ಎಷ್ಟು ಮಾಡಬೇಕು ಎನ್ನುವದನ್ನು ತಿಳಿಸುತ್ತ ಹೋಗುತ್ತೇನೆ. ಯಾವುದು ಮಾಡಲು ಸಾಧ್ಯವೋ ಅದನ್ನು ಮಾಡದೇ ಇರಬೇಡಿ. ಯಾವುದನ್ನು ಮಾಡಲು ಸಾಧ್ಯವಿಲ್ಲವೋ ಅದರ ಬಗ್ಗೆ ಸದ್ಯಕ್ಕೆ ಚಿಂತೆ ಬೇಡ. ಕೊರಗು ಬೇಡ.

ಉದಾಹರಣೆಗೆ ವೃದ್ಧಾಪ್ಯದಲ್ಲಿದ್ದಾಗ ಕೆಲವರಿಗೆ ಹಣದ ಮೇಲೆ ಅಧಿಕಾರವಿರುತ್ತದೆ, ಹಲವರಿಗೆ ಇರುವದಿಲ್ಲ. ಇದ್ದರೆ ದಾನ ಮಾಡಿ. ಇಲ್ಲದಿದ್ದರೆ ಸರ್ವಥಾ ಚಿಂತೆ ಬೇಡ. ಆದರೆ ನೀವು ಒಂದು ರೂಪಾಯಿ ದಾನ ನೀಡಿ, ಹತ್ತು ರೂಪಾಯಿ ದಾನ ನೀಡಿ,  ಆ ದಾನವನ್ನು ನಿಸ್ಪೃಹರಾದ ಜನರಿಗೆ ನೀಡಿ. ಕೇವಲ ಹೊಟ್ಟೆ ಹೊರೆಯುವದಕ್ಕಾಗಿ ಧಾರ್ಮಿಕತನದ ಸೋಗು ಹಾಕಿದ ಜನರಿಗೆ ನೀಡಬೇಡಿ. ಎಲ್ಲರಲ್ಲಿಯೂ ಭಗವಂತನೇ ಇರುತ್ತಾನೆ ತಾನೇ, ಹೀಗಾಗಿ ಯಾರಿಗೆ ಕೊಟ್ಟರೇನು ಎಂದು ಮೊಂಡುತನದ ವಾದಗಳನ್ನು ಮಾಡಲು ಹೋಗಬೇಡಿ. ಸಾವಿನ ಹೊಸ್ತಿಲಿನಲ್ಲಿದ್ದೇವೆ. ಈ ವಾದ ವಿವಾದಗಳಿಗೆ ಇದು ಸಮಯವಲ್ಲ. ಮಹಾವಿಷ್ಣುಭಕ್ತನಾದ ಒಬ್ಬ ಮಹಾನುಭಾವನಿಗೆ ನೀಡುವ ಒಂದು ಹಿಡಿ ಅಕ್ಕಿ ಸಹಿತ ನಮ್ಮನ್ನು ಸಕಲ ಪಾಪಗಳಿಂದ ಪಾರು ಮಾಡಿಬಿಡುತ್ತದೆ. ದಾಂಭಿಕತೆಯ ಸೋಗು ಹಾಕಿರುವ, ಜನ ಹಣ ಕೊಡುತ್ತಾರೆ ಎನ್ನುವದಕ್ಕಾಗಿ ಧಾರ್ಮಿಕತೆಯ ಕೆಲಸ ಮಾಡುವ ವ್ಯಕ್ತಿಗೆ ನೀಡುವ ಲಕ್ಷರೂಪಾಯಿಯೂ ಹೊಳೆಯಲ್ಲಿ ಹುಣಿಸೆ ಹಣ್ಣು

ತೊಳೆದಂತಾಗುತ್ತದೆ. ಹೀಗಾಗಿ ಪಾತ್ರರಿಗೆ ನೀಡಿ. ಪಾತ್ರರಿಗೇ ನೀಡಿ.

ಹಣವಿಲ್ಲ, ಇದ್ದರೂ ನೀಡುವ ಅಧಿಕಾರವಿಲ್ಲ ಎಂದರೆ ಚಿಂತಿಸಬೇಡಿ. ದೇವರಿಗೆ ನಮಸ್ಕಾರ ಮಾಡಿ ಪ್ರಾರ್ಥನೆ ಮಾಡಿ, ಭಗವಂತ, ಕೈಯಲ್ಲಿ ಹಣವಿದ್ದಾಗ ಯೋಗ್ಯರಿಗೆ ಅದನ್ನು ನೀಡಿ ಸಾರ್ಥಕಪಡಿಸಿಕೊಳ್ಳುವಂತೆ, ಇರುವ ಹಣದಿಂದ ಸಮಾಜಕ್ಕೆ ಒಳಿತು ಮಾಡುವಂತೆ ಮುಂದಿನ ಜನ್ಮದಲ್ಲಾದರೂ ಅನುಗ್ರಹಿಸು ಎಂದು ಪ್ರಾರ್ಥನೆ ಮಾಡಿ.

## ದೇವರ ಪೂಜೆ, ಮಂತ್ರಗಳ ಜಪ

ಇನ್ನು ಯಜ್ಞ. ದೇವರ ಪೂಜೆ, ಮಂತ್ರಗಳ ಜಪ ಈ ಎರಡು ಯಜ್ಞಗಳನ್ನು ನಿಲ್ಲಿಸಬೇಡಿ.

ಸಾಲಿಗ್ರಾಮಗಳ ಪೂಜೆ ಸಾಮಾನ್ಯವಾದ ಸತ್ಕರ್ಮವಲ್ಲ. ಶ್ರೀಮದಾಚಾರ್ಯರು ತಂತ್ರಸಾರಸಂಗ್ರಹದಲ್ಲಿ ಹೇಳುತ್ತಾರೆ — ವಿಷಯಗಳ ಸಂಪರ್ಕ ಬೇಡ ಎಂದು ನಿರ್ಧರಿಸಿ ಅವನ್ನು ತ್ಯಾಗ ಮಾಡುವದರಿಂದ ಏನು ಪುಣ್ಯ

ಗಳಿಸುತ್ತಾನೆ, ಅದರ ಕೋಟಿಪಟ್ಟು ಪುಣ್ಯವನ್ನು ವೇದಗಳ ಅಧ್ಯಯನದಿಂದ ಪಡೆಯುತ್ತಾನೆ. ಆ ವೇದಾಧ್ಯಯನದಿಂದ ಗಳಿಸುವ ಪುಣ್ಯ ಏನಿದೆ ಅದರ ಅನಂತಪಟ್ಟು ಪುಣ್ಯವನ್ನು ದೇವರ ಪೂಜೆಯಿಂದ ಗಳಿಸುತ್ತಾನೆ. ಈ ದೇವರ ಪೂಜೆಗೂ ಮಿಗಿಲಾದ ಪುಣ್ಯವನ್ನು ವೇದಗಳ ಅರ್ಥವನ್ನು ತಿಳಿಯುವದರಿಂದ, ಅದಕ್ಕೂ ಮಿಗಿಲಾದ ಪುಣ್ಯವನ್ನು ಅದರ ಅರ್ಥವನ್ನು ಶಿಷ್ಯರಿಗೆ ತಿಳಿಸಿ ಹೇಳುವದರಿಂದ ಪಡೆಯುತ್ತಾನೆ.

ಹೀಗೆ ದೇವರ ಪೂಜೆ ಮಹಾಫಲವನ್ನು ನೀಡುವದಂತಹ ಶ್ರೇಷ್ಠತಮವಾದ ಸತ್ಕರ್ಮ. ವೃದ್ಧಾಪ್ಯ ಎಂದು ದೇವರ ಪೂಜೆ ಮಾಡದೇ ನಿಲ್ಲಿಸಬೇಡಿ. ಶ್ರದ್ಧೆಯಿಂದ ಭಕ್ತಿಯಿಂದ ದೇವರ ಪೂಜೆಯನ್ನು ಮಾಡಿ.

ಮನೆಯಲ್ಲಿ ಪೂಜೆ ಮಾಡುವ ಗಂಡನಿಗೆ, ಮಕ್ಕಳಿಗೆ ಹೆಂಗಸರು ಸಹಾಯ ಮಾಡಿ. ದೇವರಿಗಾಗಿ ಶ್ರದ್ಧೆಯಿಂದ ಅಡಿಗೆ ಮಾಡಿ. ಶಾಸ್ತ್ರ ತಿಳಿಸಿದ ರೀತಿಯಲ್ಲಿ ಅಡಿಗೆ ಮಾಡಿ. ಸೌಭಾಗ್ಯವಂತರು ಹೆಣ್ಣುಮಕ್ಕಳು, ದೇವರ ಪೂಜೆಗೆ ಸಹಾಯ

ಮಾಡುವದರಿಂದಲೇ ದೇವರ ಪೂಜೆಯ ಫಲವನ್ನು ಪಡೆದುಬಿಡುತ್ತಾರೆ.

## ನೈವೇದ್ಯದಲ್ಲಿ ಆದರ

ದೇವರ ಪೂಜೆ ಮಾಡಿ, ಶುದ್ಧವಾದ ರೀತಿಯಲ್ಲಿ ಅಡಿಗೆ ಮಾಡಿ ದೇವರಿಗೆ ನೈವೇದ್ಯ ಮಾಡಿ ಅದನ್ನು ಆದರಿಂದ ಊಟ ಮಾಡಿ. ದೇವರ ನೈವೇದ್ಯಕ್ಕೆ ಎಷ್ಟು ಮಹತ್ತ್ವವಿದೆ ಎಂದರೆ, ಅದನ್ನು ಭಕ್ತಿಯಿಂದ ಉಣ್ಣುವದರಿಂದ ಬ್ರಹ್ಮಹತ್ಯೆಯ ದೋಷವನ್ನೂ ಕಳೆದುಕೊಳ್ಳುತ್ತೇವೆ.

ಅಂದರೆ, ಪ್ರಾಯಶ್ಚಿತ್ತಗಳಿಂದ ಕಳೆದುಕೊಳ್ಳಬಹುದಾದ ಪಾಪಗಳಲ್ಲಿಯೇ ಕಡೆಯ ಪಾಪ ಬ್ರಹ್ಮಹತ್ಯೆ. ಅದರ ಪ್ರಾಯಶ್ಚಿತ್ತವೂ ಅತ್ಯಂತ ಘೋರ. ಆದರೆ, ಅಂತಹ ಮಹಾಪಾತಕವೂ ನಿರಂತರ ದೇವರ ನೈವೇದ್ಯವನ್ನು ತಿನ್ನುವದರಿಂದ ಪರಿಹಾರವಾಗುತ್ತದೆ.

ಇಡಿಯ ಜೀವನದಲ್ಲಿ ತಿನ್ನಬಾರದ್ದನ್ನು ತಿಂದಿರುತ್ತೇವೆ. ತಿನ್ನಬಾರದ ಸ್ಥಳದಲ್ಲಿ ತಿಂದಿರುತ್ತೇವೆ. ಮಹಾಪಾಪಿಷ್ಠರ ಜೊತೆಯಲ್ಲಿ

ಕುಳಿತು ಊಟ ಮಾಡಿರುತ್ತೇವೆ. ಆ ಎಲ್ಲ ಪಾಪಗಳು ಪರಿಹಾರವಾಗಬೇಕು. ಹೀಗಾಗಿ ಏನುಂಡರೂ ಪರಮಾತ್ಮನಿಗೆ ಸಮರ್ಪಿಸಿಯೇ ಉಣ್ಣುವ ನಿಯಮವನ್ನು ಮಾತ್ರ ಬಿಡಬೇಡಿ.

ಪಲಿಮಾರು ಮಠಾಧೀಶರಾದ ಶ್ರೀರಘೂತ್ತಮತೀರ್ಥಶ್ರೀಪಾದಂಗಳವರು ತಾವು ನಿರ್ಯಾಣ ಹೊಂದುವ ದಿವಸ ಸಹಿತ ಯಾವ ರೀತಿ ನೈವೇದ್ಯವನ್ನು ಆದರದಿಂದ ಸ್ವೀಕರಿಸಿದರು ಎನ್ನುವದನ್ನು ನೆನಪಿಸಿಕೊಳ್ಳಿ[1]. ಭಾಗವತದಲ್ಲಿ ಉದ್ಧವ ಹೇಳುವ ಮಾತನ್ನು ನೆನಪಿಸಿಕೊಳ್ಳಿ. ಉಚ್ಚಿಷ್ಟಭೋಜಿನೋ ದಾಸಾಃ ತವ ಮಾಯಾಂ ಜಯೇಮಹಿ. ಪರಮಾತ್ಮನ ಉಚ್ಚಿಷ್ಠವನ್ನು ಉಣ್ಣುವದರಿಂದ ನಾವು ಸಂಸಾರವನ್ನು ಗೆಲ್ಲಲು ಸಾಧ್ಯ.

ಹೀಗೆ ಮಧ್ಯಾಹ್ನ ಮತ್ತು ರಾತ್ರಿ ಊಟ ಮಾಡುವದರಿಂದ ಹಿಡಿದು, ಒಂದು ಲೋಟ ನೀರು ಕುಡಿದರೂ, ಒಂದು ಬಾಳೆಹಣ್ಣು ತಿಂದರೂ ಅದನ್ನು ಪರಮಾತ್ಮನಿಗೆ, ಲಕ್ಷ್ಮೀದೇವಿಗೆ, ಪ್ರಾಣ

[1] VNA198 ರಲ್ಲಿ ವಿವರಿಸಿದ್ದೇನೆ.

ಭಾರತಿಯರಿಗೆ ಸಮರ್ಪಿಸಿ ತಿನ್ನುವ ನಿಯಮವನ್ನು ಬಿಡಬೇಡಿ. ಸರ್ವಥಾ ಬಿಡಬೇಡಿ.

ದೇವರ ಪೂಜೆಯನ್ನು ಮಾಡಲು ಸಾಧ್ಯವಿಲ್ಲದೇ ಇದ್ದರೂ, ಅಥವಾ ಕೆಲವು ಹೆಂಗಸರಿಗೆ ಮನೆಯಲ್ಲಿ ಯಾರೂ ಪೂಜೆ ಮಾಡುವವರು ಇಲ್ಲದಿದ್ದಾಗಲೂ ಚಿಂತೆಯಿಲ್ಲ.

ಶುದ್ಧವಾದ ರೀತಿಯಲ್ಲಿ, ಶುದ್ಧವಾದ ಪದಾರ್ಥಗಳಿಂದ ಅಡಿಗೆ ಮಾಡಿ. ದೇವರ ಮುಂದೆ ಮಂಡಲ ಮಾಡಿ ಆ ಅಡಿಗೆಯನ್ನಿಡಿ. ಮನಸ್ಸಿನಿಂದ ದೇವರಿಗೆ ಸಮರ್ಪಿಸಿ. ಮುಂದಿನ ಜನ್ಮದಲ್ಲಿ ವಿಧ್ಯುಕ್ತವಾದ ಕ್ರಮದಲ್ಲಿ ನಿನಗೆ ಸಮರ್ಪಿಸಿ ಉಣ್ಣುವ ಸೌಭಾಗ್ಯವನ್ನು ಕರುಣಿಸು ಎಂದು ಪ್ರಾರ್ಥಿಸಿ. ಆ ನಂತರ ಭಕ್ತಿಯಿಂದ ಸ್ವೀಕರಿಸಿ.

## ಏಕಾದಶಿ ಬಿಡಬೇಡಿ

ಇನ್ನು ಇದಕ್ಕಿಂತ ಮಿಗಿಲಾದದ್ದು ತಪಸ್ಸು. ಅದೆಷ್ಟೇ ಕಷ್ಟವಾಗಲಿ ಏಕಾದಶಿಯ ಉಪವಾಸವನ್ನು ಬಿಡಬೇಡಿ. ಏಕಾದಶಿಯ ಉಪವಾಸ, ಕೃಷ್ಣಾಷ್ಟಮಿಯ ಉಪವಾವಸಕ್ಕಿಂತ ಮಿಗಿಲಾದ

ದೊಡ್ಡ ತಪಸ್ಸು ಮತ್ತೊಂದಿಲ್ಲ. ಏನಾದರೂ ಅದನ್ನು ಬಿಡಬೇಡಿ.

ವಯಸ್ಸಾಗಿದೆ, ರೋಗಗಳಿವೆ, ಔಷಧ ತೆಗೆದುಕೊಳ್ಳಬೇಕು ಎಂದಾದಲ್ಲಿ ಬೇಯಿಸಿದ ಪದಾರ್ಥವನ್ನು ಸರ್ವಥಾ ತಿನ್ನಬೇಡಿ. ಕೇವಲ ನೀರಿನಿಂದ  ಇರಲು ಸಾಧ್ಯವಾ ನೋಡಿ. ಅದೂ ಸಾಧ್ಯವಿಲ್ಲದಿದ್ದರೆ ಹಾಲು. ಅದೂ ಸಾಧ್ಯವಿಲ್ಲದಿದ್ದರೆ ಹಣ್ಣು. ಅದೂ ಸಹಿತ ಹೊಟ್ಟೆ ತುಂಬುವಷ್ಟಲ್ಲ. ತ್ರಾಣಕ್ಕೆ ಎಷ್ಟು ಬೇಕು ಅಷ್ಟೆ. ಅದನ್ನು ಮೀರಿ ಚಪಾತಿ ಉಪ್ಪಿಟ್ಟು ತಿಂದು ಏಕಾದಶಿಯನ್ನು ಭಂಗ ಮಾಡಿಕೊಳ್ಳಬೇಡಿ. ಕೃತಯುಗದಲ್ಲಿ ಒಂದು ಸಾವಿರ ವರ್ಷ ತಪಸ್ಸು ಮಾಡಿ ಪಡೆಯಬಹುದಾದ ಪುಣ್ಯವನ್ನು ಕೇವಲ ಒಂದು ಏಕಾದಶಿಯಿಂದ ನಾವು ಕಲಿಯುಗದಲ್ಲಿ ಪಡೆಯಲು ಸಾಧ್ಯ. ಹೀಗಾಗಿ ಸರ್ವಥಾ ಬಿಡಬೇಡಿ.

## ನಮಸ್ಕಾರ

ಅತ್ಯಂತ ಸುಲಭವಾಗಿ ಮಾಡಬಹುದಾದ ಮಹಾಸಾಧನೆಯಿದು. **ಕೃಷ್ಣಪ್ರಣಾಮೀ ನ**

**ಪುನರ್ಭವಾಯ.** ಶ್ರೀಕೃಷ್ಣನಿಗೆ ನಮಸ್ಕಾರ ಮಾಡಿದ ವ್ಯಕ್ತಿ ಸಾಧನೆಯ ಮಾರ್ಗವನ್ನು ಸೇರಿದ ಎಂದೇ ಅರ್ಥ.

ದೇವರಿಗೆ ಪ್ರದಕ್ಷಿಣೆ ಬಂದು ನಮಸ್ಕಾರ ಹಾಕಬೇಕು. ದೇವರ ಮನೆಯಲ್ಲಿಯೇ ಈ ವ್ಯವಸ್ಥೆ ಇದ್ದರೆ ಸಂತೋಷ. ಇಲ್ಲದಿದ್ದರೆ ಚಿಂತೆ ಬೇಡ. ಮನೆಯ ಮಧ್ಯದಲ್ಲಿಯೋ, ಅಥವಾ ನಿಮ್ಮ ಕೊಠಡಿಯಲ್ಲಿಯೋ ಒಂದು ಮಣೆ ಇಡಿ. ಆ ಮಣೆಯ ಮೇಲೆ ಶ್ರೀಮದಾಚಾರ್ಯರ ಗ್ರಂಥಗಳನ್ನಿಡಿ. ಗ್ರಂಥಗಳಿಲ್ಲ ಎಂದಾದರೆ ಅವಶ್ಯವಾಗಿ ಒಂದು ಗ್ರಂಥವನ್ನಾದರೂ ಕೊಂಡು ತನ್ನಿ. ಗೀತಾ, ಮಹಾಭಾರತ, ಭಾಗವತಗಳು ಮತ್ತು ಮುನಿತ್ರಯರ ಗ್ರಂಥಗಳು (ಶ್ರೀಮದಾಚಾರ್ಯರು, ಶ್ರೀಮಟ್ಟೀಕಾರಾಯರು ಮತ್ತು ಶ್ರೀಮಚ್ಚಂದ್ರಿಕಾಚಾರ್ಯರು ಮುನಿತ್ರಯರು) ಮನೆಯಲ್ಲಿರಲೇಬೇಕು. ಆ ಗ್ರಂಥಗಳನ್ನು ಮಣೆಯ ಮೇಲಿಡಿ. ಎರಡು ದೀಪಗಳನ್ನು ಹಚ್ಚಿ.

ಈಗ ನೀವು ಮಾಡಿಕೊಂಡಿರುವ ಪಾಪಗಳ ಪಟ್ಟಿಯನ್ನು ತೆಗೆಯಿರಿ. ಒಂದೊಂದೇ ಪಾಪಗಳನ್ನು

ನೆನೆಸಿಕೊಂಡು, ಸ್ವಾಮೀ, ನನ್ನನ್ನು ಕ್ಷಮಿಸು, ನನ್ನನ್ನು ಕ್ಷಮಿಸು, ನನ್ನನ್ನು ಕ್ಷಮಿಸು ಎಂದು ಮನಃಪೂರ್ವಕವಾಗಿ ಪ್ರಾರ್ಥನೆ ಮಾಡುತ್ತ ಪ್ರದಕ್ಷಿಣೆ ಬಂದು ನಮಸ್ಕಾರ ಮಾಡಿ. ಶ್ರೀ ವಿಜಯೀಂದ್ರಗುರುಸಾರ್ವಭೌಮರು ರಚನೆ ಮಾಡಿರುವ ಪಾಪಮೋಚನ ಸ್ತೋತ್ರ, ಶ್ರೀ ವಾದಿರಾಜಗುರುಸಾರ್ವಭೌಮರು ರಚನೆ ಮಾಡಿರುವ ಸ್ತೋತ್ರಗಳು, ದಾಸರ ಪದಗಳು, ಆಚಾರ್ಯರ ದ್ವಾದಶಸ್ತೋತ್ರಗಳನ್ನು ಹೇಳುತ್ತ ಪ್ರದಕ್ಷಿಣೆ ಬಂದು ನಮಸ್ಕಾರ ಮಾಡಿ.

ದೇಹಕ್ಕೆ ಆಗುವದಿಲ್ಲ ಎನ್ನಬೇಡಿ. ತೀರ ಹಾಸಿಗೆಯ ಮೇಲೆ ಮಲಗಿದ್ದರೆ ಬೇರೆ ಮಾತು. ಆದರೆ ಓಡಾಡುವ ಶಕ್ತಿ ಇದೆ ಎಂದಾದಲ್ಲಿ ಅವಶ್ಯವಾಗಿ ದೇವರಿಗೆ ಪ್ರದಕ್ಷಿಣೆ ಬಂದು ನಮಸ್ಕಾರ ಮಾಡಿ. ನಮಸ್ಕಾರ ಮಾಡಲು ಮಂಡಿಗೆ ಸಾಧ್ಯವಿಲ್ಲ ಎಂದಾದಲ್ಲಿ ಪ್ರದಕ್ಷಿಣೆ ಬಂದು, ದೇವರ ಬಲಭಾಗದಲ್ಲಿ ನಿಂತು ಕೈಜೋಡಿಸಿ, ಮನಸ್ಸಿನಲ್ಲಿಯೇ ಸಾಷ್ಟಾಂಗವೆರಗಿ, ಸ್ವಾಮಿ, ನಿನ್ನ ಮುಂದೆ ಮಂಡಿಯೂರಿ ನಮಸ್ಕಾರ ಮಾಡಲೂ ಸಾಧ್ಯವಿಲ್ಲದ ಹೀನ ಅವಸ್ಥೆಯಲ್ಲಿದ್ದೇನೆ, ಕ್ಷಮಿಸು.

ಈ ರೀತಿಯ ಜನ್ಮ ಬೇಡ, ಸಾಧನೆಗೆ ಅನುಕೂಲವಾದ ಜನ್ಮವನ್ನು ಕರುಣಿಸು ಎಂದು ಪ್ರಾರ್ಥನೆ ಮಾಡಿಕೊಂಡು ನಮಸ್ಕಾರಗಳನ್ನು ಸಲ್ಲಿಸಿ. ದೇವರು ಕರುಣಾಳು. **“ಹೃದ್ಗತಾರ್ಥವನರಿತು ಒಪ್ಪಿಸಿಕೊಳ್ಳನೇ” .** ಸ್ವೀಕರಿಸುತ್ತಾನೆ ಒಡೆಯ.

## ಲೇಖನಯಜ್ಞ

ಇಡಿಯ ಜೀವನವನ್ನು ಹಣಕ್ಕಾಗಿ, ಕುಟುಂಬಕ್ಕಾಗಿ ಸವೆಸಿದ್ದಾಗಿದೆ. ಸಾಯುವ ಹಂತದಲ್ಲಿದ್ದೇವೆ, ಸರಿಯಾಗಿ ಸಂಧ್ಯಾವಂದನೆಯೂ ಬರುವದಿಲ್ಲ, ದೇವರ ಪೂಜೆಯೂ ಬರುವದಿಲ್ಲ, ತುಳಸಿಗೆ ನೀರು ಹಾಕಿ ಅರಿಶಿನ ಕುಂಕುಮ ಹಚ್ಚಬೇಕಾದರೆ ಹೇಳಬೇಕಾದ ಒಂದು ಶ್ಲೋಕವೂ ಬರುವದಿಲ್ಲ ಎಂದರೆ ಇಡಿಯ ಜೀವನ ಎಷ್ಟು ವ್ಯರ್ಥ ಮಾಡಿದ್ದೇವೆ ಎಂದರ್ಥವಲ್ಲವೇ.

ನಾವು ಮಾಡಿದ ಪಾಪ ಪರಿಹಾರವಾಗಬೇಕಾದರೆ, ನಾವು ಮುಂದಿನ ಜನ್ಮದಲ್ಲಿ ಉತ್ತಮ ದೇಹವನ್ನು ಪಡೆಯಬೇಕಾದರೆ, ಆ ದೇಹದಿಂದ ಸಾಧನೆಯನ್ನು

ಮಾಡಬೇಕಾದರೆ ನಾವು ಅವಶ್ಯವಾಗಿ ಮಾಡಬೇಕಾದ್ದು ಜ್ಞಾನಯಜ್ಞ.

ಪುರಾಣಗಳಲ್ಲಿ ಮೇಲಿಂದ ಮೇಲೆ ಒಂದು ಮಾತನ್ನು ಕೇಳುತ್ತೇವೆ. ಸಾಧನೆಗೆ ಕಲಿಯುಗ ಶ್ರೇಷ್ಠ, ಅತೀ ಕಡಿಮೆ ಸಮಯದಲ್ಲಿ ಸಾಧನೆ ಮಾಡಿ ಸಿದ್ಧಿ ಗಳಿಸಬಹುದಾದ ಕಾಲ ಕಲಿಗಾಲ ಎಂದು.

ನಿಜ, ಇವತ್ತಿನ ಈ ಘೋರ ಕಲಿಗಾಲದಲ್ಲಿಯೂ ಸಾಧನೆ ಶಕ್ಯವಿದೆ. ಮನೆಯಲ್ಲಿಯೇ ಕುಳಿತು ಪಾಠಗಳನ್ನು ಕೇಳುವ, ಪ್ರವಚನಗಳನ್ನು ಕೇಳುವ ಸೌಭಾಗ್ಯವಿದೆ.

ಸಾಯುವದರಲ್ಲಿ ನಾಲ್ಕು ಗ್ರಂಥಗಳನ್ನು ಶ್ರವಣ ಮಾಡುತ್ತೇನೆ, ಮಾಡಿದ್ದನ್ನು ಬರೆಯುತ್ತೇನೆ ಎಂದು ಶಪಥ ಮಾಡಿ. ಮೊದಲನೆಯದು ಶ್ರೀ ನಾರಾಯಣಪಂಡಿತಾಚಾರ್ಯರ ಶ್ರೀಮಧ್ವವಿಜಯ. ಎರಡನೆಯದು ಶ್ರೀಮದಾಚಾರ್ಯರ ಮಹಾಭಾರತತಾತ್ಪರ್ಯನಿರ್ಣಯ. ಸಮಗ್ರ ರಾಮಾಯಣ ಮಹಾಭಾರತದ ಕಥೆಗಳನ್ನು ನಾವಿದರಲ್ಲಿ ಕೇಳುತ್ತೇವೆ.

ಮೂರನೆಯದು ಶ್ರೀಮದ್ ಭಗವದ್ಗೀತೆ.

ನಾಲ್ಕನೆಯದು ಭಾಗವತತಾತ್ಪರ್ಯದೊಂದಿಗೆ ಸಮಗ್ರ ಶ್ರೀಮದ್ ಭಾಗವತ.

ಈ ನಾಲ್ಕುಗ್ರಂಥಗಳನ್ನು ಪರಿಪೂರ್ಣವಾಗಿ ಶ್ರವಣ ಮಾಡಿ. ಪ್ರವಚನದ ಮಧ್ಯದಲ್ಲಿ ಜೋಕುಗಳನ್ನು ಹೇಳುವ, ಕ್ರಿಕೆಟ್ಟು ಸಿನೆಮಾಗಳ ಬಗ್ಗೆ ಮಾತನಾಡುವ, ಯಾವುದೋ ಒಬ್ಬ ವ್ಯಕ್ತಿಯನ್ನು ಬಹುವಾಗಿ ವೈಭವೀಕರಿಸುವ ಪ್ರವಚನಕಾರರ ಉಪನ್ಯಾಸಗಳನ್ನು ದೂರವಿಡಿ. ಇವುಗಳಿಂದ ಸರ್ವಥಾ ಸಾಧನೆಯಿಲ್ಲ.

ಸಾಧನೆಯಿರುವದು ಭಗವಂತನ ಮಾಹಾತ್ಮ್ಯವನ್ನು ಕೇಳುವದರಲ್ಲಿ, ಶ್ರೀಮದಾಚಾರ್ಯರ ಶಾಸ್ತ್ರವನ್ನು ಅಧ್ಯಯನ ಮಾಡುವದರಲ್ಲಿ

ಇನ್ನು ಆಚಾರ್ಯರ ಸಿದ್ಧಾಂತಗಳನ್ನು ತಪ್ಪುತಪ್ಪಾಗಿ ಬಿಂಬಿಸುವ, ತನ್ನನ್ನು ತಾನು ವೈಭವೀಕರಿಸಿ-ಕೊಳ್ಳುವ, ನಾನೇ ಓದಿದ್ದೇನೆ, ಮತ್ಯಾರೂ ಓದಿಲ್ಲ ಎನ್ನುವ, ನಮ್ಮ ಪ್ರಾಚೀನ ಆಚಾರ್ಯರನ್ನು ಹೀಗಳೆಯುವ ಜನರ ಮಾತುಗಳಿಂದ ದೂರವಿರಿ.

ಮೊದಲಿನವರ ಮಾತನ್ನು ಕೇಳಿದರೆ ಅನರ್ಥವಿಲ್ಲ. ಆದರೆ ದುಷ್ಟಜನರ ಮಾತು ನಮ್ಮನ್ನು ಮಹಾ ಅನರ್ಥಕ್ಕೀಡು ಮಾಡುತ್ತದೆ. ವೇದಗಳಿಂದ ಪ್ರತಿಪಾದ್ಯನಾದ ಭಗವಂತನೂ ಒಬ್ಬನೇ ಅಲ್ಲಾಹುವೂ ಒಬ್ಬನೇ, ಕ್ರಿಸ್ತನಿಗೂ ಕೃಷ್ಣನಿಗೂ ಸಾಮ್ಯವಿದೆ ಎಂಬ ಮಾತನ್ನು ಕೇಳುವದರಿಂದ, ಅನರ್ಥವಾಗದೇ ಮತ್ತೇನಾಗಲು ಸಾಧ್ಯ. ನಮ್ಮ ದೇವರಿಗೆ ಅಲ್ಲಾಹು ಎಂಬ ಹೆಸರಿದೆ, ಕ್ರಿಸ್ತ ಎಂಬ ಹೆಸರೂ ಇದೆ. ಆದರೆ ಅಲ್ಲಾಹುವೇ ದೇವರಲ್ಲ. ಕ್ರಿಸ್ತ ಕೃಷ್ಣನಿಗೆ ಸಮಾನನಲ್ಲ. ಈ ರೀತಿಯಾಗಿ ಮಹಾ ಸತ್ಸಿದ್ಧಾಂತಗಳನ್ನೇ ನಿಂದೆ ಮಾಡುವ ಜನರ ಮಾತನ್ನು ಕೇಳಿ ಶ್ರದ್ಧೆ ಮಾಡಿದರೆ ಆಗುವ ಅನರ್ಥಕ್ಕೆ ಮಿತಿಯಿರುವದಿಲ್ಲ.

ಮೊದಲಿಗೆ ಮಧ್ವವಿಜಯ. ಕಾರಣ ಅದರ ಶ್ರವಣ **ಪ್ರಾಯಶ್ಚಿತ್ತಮಶೇಷಪಾತಕತತೇಃ.** ಸಮಸ್ತ ಪಾತಕಗಳಿಗೂ ಪ್ರಾಯಶ್ಚಿತ್ತವದು. ಸಕಲ ನದಿಗಳಲ್ಲಿ ಸ್ನಾನ ಮಾಡಿದ ಫಲಕ್ಕಿಂತಲೂ ಮಿಗಿಲಾದ ಫಲವನ್ನು ನೀಡುವ ಮಹಾಸತ್ಕರ್ಮವದು.

ಆ ನಂತರ ತಾತ್ಪರ್ಯನಿರ್ಣಯ. ಶ್ರೀರಾಮಚಂದ್ರನ, ಪಾಂಡವರ ಕಥೆಯನ್ನು ತಿಳಿಸುವ ಆಚಾರ್ಯರ ಸರ್ವಶ್ರೇಷ್ಠಕೃತಿ. ಮೋಕ್ಷಪ್ರದ ಕೃತಿ. ಅದನ್ನು ಶ್ರವಣ ಮಾಡಿ.

ಆ ನಂತರ ಗೀತೆ. ಗೀತಾಭಾಷ್ಯ ಗೀತಾತಾತ್ಪರ್ಯಗಳೊಂದಿಗೆ ಅದರ ಶ್ರವಣವನ್ನು ಮಾಡಿ. ತತ್ವಶಾಸ್ತ್ರದ ಸಮಗ್ರ ಚಿತ್ರಣವನ್ನು ನೀಡುವ ಗ್ರಂಥಗಳಿವು. ನಮ್ಮ ಮನಸ್ಸಿನ ಎಲ್ಲ ಸಂಶಯಗಳನ್ನೂ ದೂರ ಮಾಡುವ ಗುರುಗ್ರಂಥಗಳು.

ಕಡೆಯಲ್ಲಿ ಭಾಗವತ. ಭಗವಂತನನ್ನು ಹೃದಯದಲ್ಲಿ ತೋರುವ ಭಾಗವತ. ನಮ್ಮ ಪರೀಕ್ಷಿತನಿಗೆ ಮುಕ್ತಿ ನೀಡಿದ ಭಾಗವತ. ಅದರ ಶ್ರವಣವನ್ನು ಮಾಡಬೇಕು. ಅತ್ಯಂತ ಆದರದಿಂದ ಮಾಡಬೇಕು.

ವಸ್ತುಸ್ಥಿತಿಯಲ್ಲಿ ಭಾಗವತಕ್ಕಿಂತ ಮಹಾಭಾರತ ಶ್ರೇಷ್ಠ, ಮಹಾಭಾರತಕ್ಕಿಂತ ಗೀತೆ ಸರ್ವಶ್ರೇಷ್ಠ.

ಆದರೂ ಭಾಗವತ ಉಂಟು ಮಾಡುವ ಪರಿಣಾಮ ಕಡೆಯ ಕಾಲಕ್ಕೆ ಅತ್ಯಂತ ಆವಶ್ಯಕ.

ನಮ್ಮಲ್ಲಿರುವ ಭಕ್ತಿಯನ್ನು ಬಡಿದೆಬ್ಬಿಸುವ ಗ್ರಂಥವದು. ನಮ್ಮನ್ನು ಪ್ರಾಮಾಣಿಕವಾಗಿ ವಿರಕ್ತರನ್ನಾಗಿ ಮಾಡುವ ಗ್ರಂಥವದು.

ಮನಸ್ಸಿನಲ್ಲಿ ದೇವರನ್ನು ಪ್ರತಿಷ್ಠಾಪನೆ ಮಾಡಿ ಕೂಡಿಸುವ ಗ್ರಂಥವದು.

ಈ ಪ್ರವಚನಗಳನ್ನೂ  ಕೇವಲ ಕೇಳುತ್ತ ಹೋಗಬೇಡಿ. ಅದರಿಂದ ಬಹಳ ಉಪಯೋಗವಾಗುವದಿಲ್ಲ. ನೀವು ಶ್ರವಣ ಮಾಡುವದನ್ನೂ ಸಹ ಉತ್ತಮ ಕ್ರಮದಲ್ಲಿ ಮಾಡಬೇಕು.

ಬೆಳಗಿನ ಕೆಲಸಗಳನ್ನೆಲ್ಲ ಮುಗಿಸಿ. ಮಕ್ಕಳು, ಮನೆಯವರು ಎಲ್ಲ ಹೊರಗೆ ಹೊರಟ ಬಳಿಕ ಮೇಲೆ ಹೇಳಿದಂತೆ ದೇವರಿಗೆ 21 ನಮಸ್ಕಾರಗಳನ್ನು ಸಲ್ಲಿಸಿ.

ಆ ನಂತರ ಪ್ರವಚನವನ್ನು ಕೇಳುತ್ತ ಕೂಡಿ. ಕೇಳಿದ್ದನ್ನು ಬರೆಯಿರಿ. ಹೌದು, ಬರೆಯಿರಿ. ನಿಮಗೆ ಹೇಗೆ ಬರೆಯಲು ಸಾಧ್ಯವೋ ಹಾಗೆ ಬರೆಯಿರಿ.

ಅಲ್ಲಿನ ವಾಕ್ಯಗಳನ್ನು ಹಾಗೇ ಬರೆಯಿರಿ. ಶ್ರೀಮದಾಚಾರ್ಯರ ವಾಕ್ಯಗಳ ಅರ್ಥವನ್ನು ಹೊತ್ತ ಪ್ರವಚನಗಳವು. ಬರೆಯಿರಿ. ಬರೆಯಿರಿ. ಕೈಗಳು ಸಾಕು ಎನ್ನುವಷ್ಟು ಕಾಲ ಬರೆಯಿರಿ.

ಭಗವಂತನ ಮಾಹಾತ್ಮ್ಯದ ಕುರಿತ ಒಂದೊಂದು ವಾಕ್ಯ ಬರೆಯುವಾಗಲೂ ಪರ್ವತಪರ್ವತದಷ್ಟು ಪಾಪಗಳು ಕಡಿಮೆಯಾಗುತ್ತವೆ. ದೇವರಲ್ಲಿ ಭಕ್ತಿ ಮೂಡುತ್ತದೆ. ಕೇಳಿದಾಗ ತತ್ವ ಅರ್ಥವಾಗಿದ್ದಕ್ಕಿಂತ ಬರೆದಾಗ ಹೆಚ್ಚುಹೆಚ್ಚು ಅರ್ಥವಾಗುತ್ತದೆ. ಪರಿಸ್ಪಷ್ಟವಾಗಿ ಅರ್ಥವಾಗುತ್ತದೆ. ಮತ್ತಷ್ಟುಮತ್ತಷ್ಟು ತಿಳಿಯುವ ಹಂಬಲ ಮೂಡುತ್ತದೆ. ಸಂಸಾರದಲ್ಲಿ ನಿಜವಾಗಿಯೂ ಆಸಕ್ತಿ ನೀಗುತ್ತದೆ.

ಯಾರಿಗೆ ಗೊತ್ತು, ನಿಮ್ಮ ಪ್ರಾಮಾಣಿಕವಾದ ಪ್ರಯತ್ನಕ್ಕೆ ಮೆಚ್ಚಿ, ಶ್ರವಣಪ್ರೀತಿಗೆ ಮೆಚ್ಚಿ ನೀವು ಶ್ರೀಮದಾಚಾರ್ಯರ ಶಾಸ್ತ್ರದ ಕುರಿತ ಒಂದು

ವಾಕ್ಯವನ್ನು ಬರೆಯಬೇಕಾದರೇ ನಿಮಗೆ ಮರಣ ಬಂದರೆ, ಅದಕ್ಕಿಂತ ಬೇರೆ ಸೌಭಾಗ್ಯವುಂಟೇ.

ಈ ಜನ್ಮದಲ್ಲಲ್ಲ, ಹಿಂದಿನ ಜನ್ಮಗಳಲ್ಲಿಯೂ ಮಾಡಿದ ಪಾಪಗಳನ್ನು ಪರಿಹರಿಸಿಕೊಳ್ಳುತ್ತೇವೆ ಈ ಅಧ್ಯಯನದಿಂದ.

ಇನ್ನು ಪ್ರವಚನಗಳೇ ಆಗಬೇಕೆಂದಿಲ್ಲ. ಮೇಲೆ ಹೇಳಿದ ಗ್ರಂಥಗಳ ಅನುವಾದ ಪುಸ್ತಕಗಳನ್ನು ತಂದಿಟ್ಟುಕೊಳ್ಳಿ.

ಮಧ್ವವಿಜಯ, ಮಹಾಭಾರತತಾತ್ಪರ್ಯನಿರ್ಣಯ, ಗೀತಾ, ಭಾಗವತಗಳನ್ನು ಅಲ್ಲಿ ಹೇಗಿದೆಯೋ ಹಾಗೇ ನೋಡಿನೋಡಿ ಬರೆಯುತ್ತ ಹೋಗಿ.

ಶ್ರೀಮದಾಚಾರ್ಯರ ಶಾಸ್ತ್ರದ ಒಂದು ಅಕ್ಷರವನ್ನು ಬರೆದರೇ ಗಂಗಾನದಿಯ ತೀರದಲ್ಲಿ ವಿಷ್ಣುಮಂದಿರವನ್ನು ಕಟ್ಟಿಸಿದಷ್ಟು ಮಹಾಪುಣ್ಯ. ಮೇರುಪರ್ವತದಂತಹ ಪಾಪಗಳೂ ಭಸ್ಮವಾಗುತ್ತವೆ. ಆಚಾರ್ಯರ ಶಾಸ್ತ್ರವನ್ನು ಬರೆಯಿರಿ. ಬರೆಯುವದನ್ನೇ ನಿಮ್ಮ ಕಡೆಯಕಾಲದ ಕಾಯಕವನ್ನಾಗಿ ಮಾಡಿಕೊಳ್ಳಿ.

ನಾವು ಮಾಡಿದ ಪಾಪಗಳನ್ನು ಕಳೆದುಕೊಳ್ಳಲು ಶಾಸ್ತ್ರದ ಶ್ರವಣ, ಅಧ್ಯಯನ, ಲೇಖನಗಳಿಗಿಂತ ಸರ್ವಶ್ರೇಷ್ಠವಾದ ಮಾರ್ಗ. ನಿಯಮಿತವಾಗಿ ಅದನ್ನು ಮಾಡಿ.

ವಯಸ್ಸಾಗುತ್ತಿದ್ದಂತೆ ರಾತ್ರಿಯ ನಿದ್ರೆ ಕಡಿಮೆಯಾಗುತ್ತದೆ. ಅನಿವಾರ್ಯವಾಗಿ ಊಟ ತಿಂಡಿಗಳು ಕಡಿಮೆಯಾಗುತ್ತವೆ. ಅವನ್ನು ಲಾಭಕ್ಕಾಗಿ, ಜ್ಞಾನಲಾಭಕ್ಕಾಗಿ ಉಪಯೋಗಿಸಿಕೊಳ್ಳಿ.

ರಾತ್ರಿ ನಿದ್ರೆ ಬರಲಿಲ್ಲವಾದರೆ ಎದ್ದು ಕುಳಿತು ಮತ್ತೊಬ್ಬರಿಗೆ ತೊಂದರೆಯಾಗದಂತೆ ಬರೆಯಿರಿ. ಬರೆದದ್ದನ್ನು ಓದಿರಿ.

ಈ ಬರವಣಿಗೆ ಅಧ್ಯಯನಗಳ ಕಾರ್ಯವನ್ನು ಮಾಡಲು ಆರಂಭಿಸಿ ನೋಡಿ. ಯಾವ ವಿಷ್ಣುಸ್ಮರಣೆಯನ್ನು ಪಡೆಯಲು ನಾವು ನಿರಂತರ ಶ್ರಮ ಪಡಬೇಕೋ ಆ ವಿಷ್ಣುಸ್ಮರಣೆ ನಿರಂತರವಾಗಿ ಬಂದೊದಗುತ್ತದೆ.

ನಮ್ಮ ಶ್ರೀವಾದಿರಾಜಗುರುಸಾರ್ವಭೌಮರು, ಪರಮಾದ್ಭುತ ರೀತಿಯಲ್ಲಿ ಭಗವಂತನನ್ನು ಒಲಿಸಿಕೊಂಡು ಅವನನ್ನು ಆರಾಧಿಸಿದ ಮಹಾನುಭಾವರು, ಅವರು ದೇವರಲ್ಲಿ ಬೇಡಿದ್ದೇನು ಗೊತ್ತೆ — ಕರೌ ಸುಖತೀರ್ಥಸ್ಯ ಲೇಖನೇ. ಸ್ವಾಮಿ, ಕಟ್ಟ ಕಡೆಯ ಕ್ಷಣದವರೆಗೆ ಶ್ರೀಮದಾಚಾರ್ಯರ ವಾಕ್ಯಗಳ ವ್ಯಾಖ್ಯಾನವನ್ನು ಮಾಡುವ ಸೌಭಾಗ್ಯವನ್ನು ಕರುಣಿಸು ಎಂದು.

ನಾವು ವ್ಯಾಖ್ಯಾನ ಮಾಡುವ ಹಂತ ದೂರ ಉಳಿಯಿತು, ಇನ್ನೂ ಅರ್ಥ ಮಾಡಿಕೊಳ್ಳುವ ಹಂತವನ್ನೂ ಮುಟ್ಟಿಲ್ಲ. ಹೀಗಾಗಿ ಇನ್ನೂ ಹೆಚ್ಚಿನ ತ್ವರೆಯಿಂದ ಬರವಣಿಗೆಯಲ್ಲಿ ತೊಡಗಿಸಿಕೊಳ್ಳಬೇಕು. ಬರೆಯಬೇಕಾದರೆ ಆಚಾರ್ಯರನ್ನು ಪ್ರಾರ್ಥನೆ ಮಾಡಿ, ಗುರುದೇವ, ಈ ಗ್ರಂಥಗಳ ಅರ್ಥವನ್ನು ಗುರುಮುಖೇನ ಕೇಳುವ ಸೌಭಾಗ್ಯವನ್ನು ಮುಂದಿನ ಜನ್ಮದಲ್ಲಿ ಕರುಣಿಸಿ. ಗುರುಗಳ ಮನೆಯಲ್ಲಿಯೇ ಹುಟ್ಟುವಂತೆ ಹರಸಿ. ಹುಟ್ಟಿನಿಂದ ನಿಮ್ಮ ಶಾಸ್ತ್ರದ ಅಧ್ಯಯನ ಮಾಡುವಂತೆ ಅನುಗ್ರಹಿಸಿ ಎಂದು.

ಇನ್ನು ದಾಸರ ಪದಗಳು. ಸ್ತೋತ್ರಗಳು. ನಮ್ಮ ಭಕ್ತಿಯ ಅಭಿವ್ಯಕ್ತಿಗೆ ಶ್ರೇಷ್ಠವಾದ ಮಾರ್ಗಗಳು. ಸಂಜೆಯ ಹೊತ್ತು ದೇವರ ಮುಂದೆ ಕುಳಿತು ಭಕ್ತಿಯಿಂದ ಹಾಡು ಹೇಳಿ. ಸ್ತೋತ್ರ ಹಾಡಿ. ದ್ವಾದಶಸ್ತೋತ್ರದ ಪಠಣೆ ಮಾಡಿ.

ಹೀಗೆ ವೃದ್ಧಾಪ್ಯದ ಹೊಸ್ತಿಲಿನಲ್ಲಿ ಇದ್ದಾಗ ಅಥವಾ ಸಾವಿಗೆ ಹತ್ತಿರವಾಗುತ್ತಿದ್ದಂತೆ ಲೌಕಿಕ ಬಂಧನವನ್ನು ದೂರ ಮಾಡಿಕೊಳ್ಳಬೇಕು. ಶಾಸ್ತ್ರದ ಶ್ರವಣ ಅಧ್ಯಯನ ಲೇಖನಗಳಲ್ಲಿ ತೊಡಗಿಸಿಕೊಳ್ಳಬೇಕು.

ನೀವು ಯಾವ ಲೌಕಿಕ ಬಂಧನವನ್ನು ಬಿಡಿ, ಬಿಡದಿರಿ ಆದರೆ ಆ ಟೀವಿ ಎಂಬ ಕಲಿಯಿಂದ ದೂರವಾಗಿಬಿಡಿ. ಸಾಯುವ ಕ್ಷಣಕ್ಕೆ ಟೀವಿಯ ಮುಂದೆ ಕುಳಿತು ಸಾಯುವ ದೌರ್ಭಾಗ್ಯ ಬೇಡ. ನಾವು ಎಲ್ಲವನ್ನೂ ತೊರೆದು ಹೋಗಬಹುದು, ಆದರೆ ಟೀವಿ ಎಂಬ ಒಬ್ಬ ಕಲಿ ಇದ್ದರೆ ಸಾಕು, ಸಕಲ ಪಾಪಗಳನ್ನು ಒಟ್ಟಿಗೇ ಸಂಪಾದಿಸುತ್ತೇವೆ.

ಸಾಯುವ ಕಾಲ ಹತ್ತಿರವಾಗಿದೆ. ಯಮದೂತರು ದಾರಿಯಲ್ಲಿದ್ದಾರೆ. ನಮ್ಮ ನಿರ್ಯಾಣ ಸಮೀಪಿಸುತ್ತಿದೆ.

ಇಳಿದ ತಕ್ಷಣ ನಡೆಯುವ ದಾರಿ ಭಯಂಕರವಾಗಿರಬೇಕೋ, ಸುಗಮವಾಗಿರಬೇಕೋ ಎನ್ನುವದನ್ನು ನಾವೇ ನಿರ್ಧರಿಸಬೇಕು.

ಆಚಾರ್ಯರ ಶಾಸ್ತ್ರದ ಒಂದಕ್ಷರದ ಜ್ಞಾನ, ಒಂದು ಶುದ್ಧವಾದ ತತ್ವಜ್ಞಾನ, ಒಂದು ಭಕ್ತಿಯುಕ್ತವಾದ ಸ್ಮರಣೆ, ಒಂದು ನಮಸ್ಕಾರ ಇವೆಲ್ಲವೂ ನಮ್ಮನ್ನು ಯಮನಿಂದ ದೂರ ಮಾಡುತ್ತವೆ. ಅರ್ಥಾತ್ ಪಾಪಗಳನ್ನು ಕಳೆಯುತ್ತವೆ.

ಯಮಧರ್ಮನ ಮುಂದೆ ನಿಂತಾಗ ನಮ್ಮ ಕೋಟಿಕೋಟಿ ಪಾಪಗಳನ್ನು ಲೆಕ್ಕಹಾಕಿ ಹೇಳಲಿ. ನಾವು ಒಂದು ಬಾರಿಯಾದರೂ ದ್ವಾದಶಸ್ತೋತ್ರವನ್ನು ಭಕ್ತಿಯಿಂದ ಪಠಿಸಿದ್ದಲ್ಲಿ, ಒಂದು ಬಾರಿಯಾದರೂ ಪರಿಶುದ್ಧವಾಗಿ ಸಾಲಿಗ್ರಾಮದ ಪೂಜೆಯನ್ನು ಮಾಡಿದ್ದಲ್ಲಿ, ದೇವರ ಪೂಜೆಗೆ ಅನುಕೂಲ ಮಾಡಿಕೊಟ್ಟಿದ್ದಲ್ಲಿ ಯಮ ನಮ್ಮನ್ನು ಅನುಗ್ರಹಿಸುತ್ತಾನೆ. ನಮ್ಮ ಪಾಪಗಳು ಭಸ್ಮವಾಗಿವೆ ಎಂದು ಉದ್ಘೋಷಿಸುತ್ತಾನೆ.

ಶುದ್ಧ ವೈಷ್ಣವಜನ್ಮವನ್ನು ಕರುಣಿಸುತ್ತಾನೆ.

ಪಾಪಗಳಿಂದ ತ್ರಸ್ತರಾದ, ಯಾರೂ ಕಾಯುವರಿಲ್ಲದ ನಮ್ಮನ್ನು ಕಾಪಾಡುವದು ಒಂದೇ ಅದು ಮಧ್ವಶಾಸ್ತ್ರ. ಪರಮಮಂಗಳ ಶ್ರೀಮನ್ ಮಧ್ವಶಾಸ್ತ್ರ. ವಾಯುದೇವರು, ಇಂದ್ರದೇವರು, ಪ್ರಹ್ಲಾದರಾಜರು ಮುನಿತ್ರಯರಾಗಿ ಅವತಾರ ಮಾಡಿಬಂದು ನಮಗೆ ಭಗವತ್ತತ್ವವನ್ನು ತಿಳಿಸಿದ್ದಾರೆ, ಅವುಗಳನ್ನು ಆಶ್ರಯಿಸುವದರಿಂದ ಸಾವಿನ ನಂತರ ಏನು ಎಂಬ ಭಯ ನಮಗೆ ಇರುವದಿಲ್ಲ. ಸರ್ವಥಾ ಇರುವದಿಲ್ಲ.

ಇಂದಿನ ದಿನವೇ ಶುಭದಿನವು. ಇಂದೇ ಪೂಜೆ, ನಮಸ್ಕಾರ, ಶ್ರವಣ, ಅಧ್ಯಯನ, ಬರವಣಿಗೆ, ಸ್ಮರಣೆಗಳನ್ನು ಆರಂಭಿಸಿ.

ನಿಮ್ಮಿಂದ ಉತ್ತಮ ಸಾಧನೆಯಾಗಲಿ, ನಿಮ್ಮ ಪಾಪಗಳು ಪರಿಹಾರವಾಗಲಿ, ಶ್ರೇಷ್ಠ ವೈಷ್ಣವಜನ್ಮ ದೊರಕಿ ಆಚಾರ್ಯರ ಶಾಸ್ತ್ರದ ಅಧ್ಯಯನ ನಿಮ್ಮಿಂದ ನಡೆಯಲಿ ಎಂಬ ಹಾರೈಕೆಯೊಂದಿಗೆ

— ವಿಷ್ಣುದಾಸ ನಾಗೇಂದ್ರಾಚಾರ್ಯ

# <u>ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ</u>

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು**
**ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

**Vishnudasa Nagendracharya**

No. 2, “Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491